~ಮುಂಜಾನೆ ಮಾತು ~
ನಮ್ಮ ಸಾಧನೆಯ ಹಾದಿಯಲ್ಲಿ ಸಿಗುವ ಸೋಲು ಗೆಲುವುಗಳನ್ನು ಸಹಜವೆಂಬಂತೆ ಸ್ವೀಕರಿಸುತ್ತಾ ಸಾಗಿದರೆ ಪ್ರಯಾಣ ಅನಾಯಾಸವೆನ್ನಿಸಿ ನೆಮ್ಮದಿ ನಮ್ಮದಾಗುತ್ತದೆ!

# ವಿಜಯವಾಣಿ

ಕನ್ನಡಿಗರ ಧ್ವನಿ

ನಂ.1 ಕನ್ನಡ ದಿನಪತ್ರಿಕೆ



ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI ● MANGALURU | ಮಂಗಳೂರು ● ಸಂಪುಟ 5 ● ಸಂಚಿಕೆ 313

vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 11 ಫೆಬ್ರವರಿ 2017 | ಶನಿವಾರ | 11 FEBRU

## 18ರಂದು ಕ್ವೆಸ್ಟ್ ಫಾರ್ ದಿ ಬೆಸ್ಟ್ ಇಂಜಿನಿಯರಿಂಗ್ ಮೈಂಡ್ಸ್

**ಮಂಗಳೂರು:** ವಿದ್ಯಾರ್ಥಿಗಳು, ವೃತ್ತಿಪರರು ಹಾಗೂ ಸ್ಟಾರ್ಟ್ ಅಪ್ ಆರಂಭಿಸುವವರಿಗೆ ವಿವಿಧ ಬಗೆಯ ಸ್ಪರ್ಧೆಗಳನ್ನು ಒಳಗೊಂಡ 'ಕೋಡ್ ಕ್ವೆಸ್ಟ್-2ಕೆ17' ಸ್ಪರ್ಧೆ ಫೆಬ್ರವರಿ 18ರಂದು ಸಹ್ಯಾದ್ರಿ ಕಾಲೇಜಿನಲ್ಲಿ ನಡೆಯಲಿದೆ.

ಈ ಸ್ಪರ್ಧೆ ಮಂಗಳೂರಿನಲ್ಲೇ ದೊಡ್ಡ ಹ್ಯಾಕಥಾನ್ ಆಗಿದ್ದು, ಹ್ಯಾಕಥಾನ್, ಕಾರ್ಯಾಗಾರ, ಕೋಡಿಂಗ್ ಈವೆಂಟ್ಸ್, ತಾಂತ್ರಿಕ ಚರ್ಚೆಗಳು ನಡೆಯಲಿದ್ದು, ಸಮಸ್ಯೆಗಳನ್ನು ಪರಿಹರಿಸುವುದು, ಸ್ಟಾರ್ಟ್‌ಅಪ್ಸ್, ಕಾರ್ಪೊರೇಟ್ ಹಾಗೂ ಹವ್ಯಾಸಿ ಬರಹಗಾರರಿಗೆ ಈ ಸ್ಪರ್ಧೆಯಲ್ಲಿ 1 ಲಕ್ಷ ರೂ. ಬಹುಮಾನ ಗೆಲ್ಲುವ ಅವಕಾಶ ಇದೆ.

18ರಂದು ಬೆಳಗ್ಗೆ 9 ಗಂಟೆಗೆ ಆರಂಭವಾಗಿ 36 ಗಂಟೆಗಳ ಕಾಲ 2 ದಿನ ಹಾಗೂ 1 ರಾತ್ರಿ ನಡೆಯಲಿದೆ. ವಿವಿಧ ಉದ್ಯಮಗಳಲ್ಲಿ ಕೆಲಸ ಮಾಡುವವರನ್ನು ಭೇಟಿ ಮಾಡಲು ಹ್ಯಾಕಥಾನ್ ಅವಕಾಶ ಕಲ್ಪಿಸಿದ್ದು, ನೂತನ ತಂತ್ರಜ್ಞಾನದಲ್ಲಿ ಹೊಸದಾಗಿ ಕಂಪೆನಿ ಆರಂಭಿಸುವವರಿಗೆ ಸೂಕ್ತ ಸಲಹೆ ಪಡೆಯಲು ಅನುಕೂಲ. ಮಂಗಳೂರು ಸುತ್ತಮುತ್ತಲ ಐಟಿ ಕಂಪೆನಿಗಳು ಕೋಡ್‌ಕ್ವೆಸ್ಟ್‌ನಲ್ಲಿ ಭಾಗವಹಿಸಲಿದ್ದು, ವಿದ್ಯಾರ್ಥಿಗಳು, ಸ್ಟಾರ್ಟ್ ಅಪ್‌ಗಳು ತಮ್ಮ ಕೌಶಲ ಪ್ರದರ್ಶಿಸಲು ಅವಕಾಶ ಇದೆ. ಹೆಚ್ಚಿನ ವಿವರಗಳಿಗೆ ಫೋನ್: 94800 94011ಸಂಪರ್ಕಿಸಬಹುದು.